# ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಲಿಮಿಟೆಡ್
# HUBBALLI-DHARWAD SMART CITY LIMITED

Special Purpose Vehicle for Implimentation of Smart City Project
(Registered Company No. CIN : U74999KA2017 PLC101265)

ಸಂಖ್ಯೆ/ಎಚ್‌ಡಿಎಸ್‌ಸಿಎಲ್/ಪತ್ರಿಕಾ ಮಾಹಿತಿ/**2017-18** ದಿನಾಂಕ : **16-11-2017**

**ಪತ್ರಿಕಾ ಮಾಹಿತಿ**

**ವಿಷಯ :** ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **16-11-2017** ಬುಧವಾರ ರಂದು ರಾಮಲಿಂಗೇಶ್ವರ ತೋಳನಕೆರೆ ಹುಬ್ಬಳ್ಳಿಯಲ್ಲಿ, ತೋಳನಕೆರೆ ಉದ್ಯಾನವನ ಅಭಿವೃದ್ದಿಯ ಹಾಗೂ ನವೀಕರಣ ಯೋಜನೆಯ ಕುರಿತು ಹಿರಿಯ ನಾಗರೀಕರು ಹಾಗೂ ಪರಿಸರ ಪ್ರೇಮಿಗಳೊಂದಿಗೆ ಸಮಾಲೋಚನೆ ನಡೆಸಿದ ಕುರಿತು ವರದಿ.

* * * * *

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **16-11-2017** ಬುಧವಾರ ರಂದು ರಾಮಲಿಂಗೇಶ್ವರನಗರ ತೋಳನಕೆರೆ ಹುಬ್ಬಳ್ಳಿಯಲ್ಲಿ ತೋಳನಕೆರೆ ಅಭಿವೃದ್ದಿ ಹಾಗೂ ಉದ್ಯಾನವನ ನವೀಕರಣ ಯೋಜನೆಯ ಕುರಿತು ಹಿರಿಯ ನಾಗರೀಕರು ಹಾಗೂ ಪರಿಸರ ಪ್ರೇಮಿಗಳೊಂದಿಗೆ ಮುಕ್ತ ಸಮಾಲೋಚನೆಯನ್ನು ಸಂಘಟಿಸಲಾಗಿತ್ತು. ಸದರಿ ಸಮಾಲೋಚನೆಯಲ್ಲಿ ಪಾಲಿಕೆಯ ವಾರ್ಡ ಸದಸ್ಯರಾದ ಶ್ರೀ ಸಂತೋಷ ಹಿರೇಕೆರೂರ ಪಕ್ಕದ ವಾರ್ಡ ಸದಸ್ಯರಾದ ಶ್ರೀ ಮಹೇಶ ಬುರ್ಲಿ, ತೋಳನಕೆರೆ ಉದ್ಯಾನವನ ನಾಗರೀಕ ಸಂಘದ ಅಧ್ಯಕ್ಷರಾದ ಡಾ॥ ಯಾದವಾಡ, ಡಾ॥ ವಿ. ಬಿ. ನಿಟಾಲಿ, ಶ್ರೀ ಮುರಳಿ ಕರ್ಜಗಿ, ನಗರ ಯೋಜನೆ ಉಪನಿರ್ದೇಶಕರಾದ ಶ್ರೀ ಹಿರೇಮಠ ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್, ಪಿಡಬ್ಲ್ಯೂಸಿ ಸಂಸ್ಥೆಯ ಪರಿಣಿತ ತಜ್ಞರು, ವಲಯ ಕಚೇರಿ ಸಹಾಯಕ ಆಯುಕ್ತರಾದ ಶ್ರೀ ಪ್ರಕಾಶ ಡಿ. ಗಾಳೆಮ್ಮನವರ, ಸಂಕಲ್ಪ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಂತೋಷ ನರಗುಂದ ಮತ್ತು ನಾಗರೀಕರು ಭಾಗವಹಿಸಿದ್ದರು.

ಸಮಾಲೋಚನೆ ಸಭೆಯಲ್ಲಿ ತೋಳನಕೆರೆಯ ಅಭಿವೃದ್ದಿಯ ಅಂದಾಜು ನೀಲಿನಕ್ಷೆ, ಉದ್ದೇಶಿತ ಚಟುವಟಿಕೆಗಳು ಮತ್ತು ಯೋಜನೆಗಳ ಅನುಷ್ಠಾನದ ಪದ್ದತಿ ಪ್ರಸ್ತುತ ಕೆರೆಯ ಚಿತ್ರಣದ ಕುರಿತು ವಿವರವಾಗಿ ಚರ್ಚಿಸಲಾಗಿ ಈ ಕೆಳಗೆ ವಿವರಸಿದಂತೆ ಅಭಿಪ್ರಾಯಗಳನ್ನು ಸ್ವೀಕರಿಸಲಾಯಿತು.

1. ಈಗಾಗಲೇ ಈ ಪ್ರದೇಶದ ಅಭಿವೃದ್ದಿಯಲ್ಲಿ ಆದ ಕಾಮಗಾರಿಗಳು ಮತ್ತು ಉಪಕರಣಗಳು ಸರಿಯಾಗಿ ನಿರ್ವಹಣೆ ಆಗದೇ ಇರುವುದರಿಂದ ಹಾಳಾಗಿ ಹೋಗಿರುವುದು. ಕಾರಣ ಉದ್ಯಾನವನದ ಕಂಪೌಂಡ ಗೋಡೆ ಎತ್ತರಿಸಿ ಭದ್ರತೆಯನ್ನು ಹೆಚ್ಚಿಸಿ ಉದ್ಯಾನವನದಲ್ಲಿ ಸಿಸಿ ಟಿವಿ ಹಾಗೂ ಭದ್ರತಾ ವ್ಯವಸ್ಥೆಯನ್ನು ಸ್ಥಾಪಿಸಬೇಕು. ಪೋಲೀಸ್ ಔಟ್ ಪೋಸ್ಟ ಪ್ರಾರಂಬಿಸಬೇಕು.
2. ಈಗಿರುವ ಕೆರೆಯ ನೀರಿನ ಮಟ್ಟ ಹೆಚ್ಚಿಸಲು ಅನುಕೂಲವಾಗುವಂತೆ ಕ್ಯಾಚ್‌ಮೆಂಟ ಸ್ಥಳಗಳನ್ನು ಗುರುತಿಸಿ ಅವುಗಳನ್ನು ಸ್ವಚ್ಚಗೊಳಿಸಿ ಕೆರೆಗೆ ಸಂಪರ್ಕ ಒದಗಿಸಬೇಕು.
3. ಪಾದಚಾರಿ ರಸ್ತೆ ಅಗಲೀಕರಣ ಮಾಡಿ ಕಂಪೌಂಡ ಗೋಡೆಯ ಸುತ್ತ ಮತ್ತೊಂದು ಪಾದಚಾರಿ ರಸ್ತೆ ನಿರ್ಮಾಣ ಮಾಡಬೇಕು.
4. ತಾಂತ್ರಿಕವಾಗಿ ಪರಿಶೀಲಿಸಿ ಈಜುಗೊಳ ನಿರ್ಮಾಣ ಮಾಡಬೇಕು. ಪ್ರತ್ಯೇಕವಾಗಿ ಧ್ಯಾನಮಂದಿರ, ಯೋಗಶಾಲೆ, ಹಾಸ್ಯಚಟುವಟಿಕೆಗಳಿಗೆ ಪ್ರತ್ಯೇಕ ಸ್ಥಳವನ್ನು ಗುರುತಿಸಿ ಒದಗಿಸಬೇಕು. ಪಕ್ಷಿಗಳ ಸಂಕುಲನಕ್ಕೆ ತೊಂದರೆಯಾಗದಂತೆ ಮತ್ತು ಪಕ್ಷಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಪಕ್ಷಿಧಾಮವನ್ನು ಸ್ಥಾಪನೆ ಮಾಡಬೇಕು.
5. ಕೆರೆಯಲ್ಲಿ ಪೌಂಟೇನ್ ಸ್ಥಾಪನೆ ಮಾಡಬೇಕು. ನಾಗರೀಕರಿಗೆ ಉಚಿತವಾಗಿ ಪ್ರವೇಶ ಒದಗಿಸಬೇಕು. ಉತ್ತಮ ಬೆಳಕಿನ ವ್ಯವಸ್ಥೆ ಆಗಬೇಕು.
6. ಸ್ಮಾರ್ಟಸಿಟಿ ಯೋಜನೆಯಲ್ಲಿ ಅನುಷ್ಠಾನಗೊಳಿಸುವ ಯೋಜನೆಯನ್ನು ಸ್ಥಳೀಯ ಸಮಿತಿಯನ್ನು ರಚಿಸಿ ಅವರ ಸಲಹೆಯೊಂದಿಗೆ ಮಾರ್ಪಡಿಸಿ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಕೈಕೊಳ್ಳಬೇಕು. ಸದರಿ ಯೋಜನೆಯನ್ನು ನಿರಂತರವಾಗಿ ಪರಿಣಾಮಕಾರಿಯಾಗಿ ಸಭಲತೆಯನ್ನು ಹೊಂದಲು ಪರಿಶೀಲನೆ ಆಗುತ್ತಿರಬೇಕು.
7. ಯೋಜನೆ ಅನುಷ್ಠಾನಗೊಂಡ ನಂತರ ಉತ್ತಮ ಸಂಸ್ಥೆಯಿಂದ ನಿರ್ವಹಣೆ ಆಗಬೇಕು. ಪೆಡಲ್ ಬೋಟಿಂಗ್ ವ್ಯವಸ್ಥೆ ಮತ್ತು ಪರಿಸರ ಮತ್ತು ಕೆರೆಗೆ ಹಾನಿಯಾಗದಂತೆ ಕಾಮಗಾರಿ ತೆಗೆದುಕೊಳ್ಳಬೇಕು.
8. ಕೆರೆಯ ವಿಸ್ತೀರ್ಣದ ಕುರಿತು ಸಂಬಂಧಪಟ್ಟ ನೀರಾವರಿ ಇಲಾಖೆಯಿಂದ ದೃಢೀಕರಿಸಿಕೊಳ್ಳಬೇಕು, ಅತೀಕ್ರಮಣ ಆಗಿದ್ದಲ್ಲಿ ಅದನ್ನು ಸರಿಪಡಿಸಬೇಕು. ಉದ್ಯಾನವನದ ಒಳಗೆ ಪ್ರಾಣಿಗಳು ಬರದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸದರಿ ಉದ್ಯಾನವನದಲ್ಲಿ ಪ್ರಸ್ತುತ ದನ, ಆಕಳುಗಳು ನೀರು ಕುಡಿಯಲಿಕ್ಕೆ ಬರುತ್ತಿದ್ದು ಅವುಗಳಿಗೆ ಪ್ರತ್ಯೇಕವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಉದ್ಯಾನವನದ ಕಂಪೌಂಡ ಹೊರಗಡೆ ನಿರ್ಮಿಸಿ ವ್ಯವಸ್ಥೆ ಕಲ್ಪಿಸುವುದು.
9. ಉದ್ಯಾನವನದ ಹತ್ತಿರ ಹಳೆಯ ಮಂದಿರವಿದ್ದು ಅದನ್ನು ನಿರ್ಮಿಸಬೇಕು. ಧಾರ್ಮಿಕ ಮನೋಭಾವನೆಗೆ ಧಕ್ಕೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು.

ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್, ಇವರು ಮಾತನಾಡಿ ತಾವು ನೀಡಿರುವ ಸಲಹೆಗಳನ್ನು ದಾಖಲಿಸಲಾಗಿದೆ. ಪ್ರಸ್ತುತ ತಯಾರಿಸಿರುವ ಸಾಧ್ಯತಾ ವರದಿಯಲ್ಲಿ (ಡಿ.ಪಿ.ಆರ್) ದಲ್ಲಿ ಅಳವಡಿಸಲಾಗುವುದು. ಸ್ಮಾರ್ಟಸಿಟಿ ಯೋಜನೆಯಲ್ಲಿ ತೆಗೆದುಕೊಳ್ಳುವ ಎಲ್ಲ ಪೂರಕ ಮತ್ತು ಅನುಷ್ಠಾನಗೊಳಿಸುವ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಪೂರೈಸುವದಾಗಿ ತಿಳಿಸಿದರು. ಈ ವರದಿಯೊಂದಿಗೆ ಸಮಾಲೋಚನಾ ಸಭೆಯ ಫೋಟೋಗಳನ್ನು ಲಗತ್ತಿಸಿ ಕಳಿಸಲಾಗಿದೆ.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿ
ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ-ಮೇಲ್ :** sohdsmartcity@gmail.com

**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ ಕಾಲೇಜ ಆವರಣ ವಿದ್ಯಾನಗರ, ಹುಬ್ಬಳ್ಳಿ